

ಕೃಷ್ಣಂ ಪ್ರಣಯ ಸಖಿ:
ಗಣೇಶ್‌ಗೆ ದೊರಕದ
ಗೆಲುವಿನ ಸಿಹಿ

2018ರಲ್ಲಿ ತೆರೆಕಂಡ ಸಿನಿಮಾಗಳ ಸಂಖ್ಯೆ ಸುಮಾರು 225. ಇದು ಕನ್ನಡ ಚಿತ್ರರಂಗದ ಚೊಚ್ಚಿಲ ದ್ವಿಶತಕ! ಒಂದೆಡೆ 4000 ಸಂಖ್ಯಾವಿಶೇಷ, ಇನ್ನೊಂದೆಡೆ ಶತಕಯುಗಳ – ಈ ವಿಶೇಷಣಗಳ ಕಾರಣದಿಂದಾಗಿ 2018 ಸ್ಮರಣೀಯವೆನ್ನಿಸಿತು. ಈ ಸಂಖ್ಯಾ ಉಬ್ಬರ 2019ರಲ್ಲೂ ಮುಂದುವರೆದರೂ ಮತ್ತೊಂದು ದ್ವಿಶತಕದ ಸಾಧನೆ ಕೊರೊನಾ ಕಾರಣದಿಂದಾಗಿ ಸ್ವಲ್ಪದರಲ್ಲಿ ತಪ್ಪಿಹೋಯಿತು. ವರ್ಷದ ಕೊನೆಯಲ್ಲಿ ಕಾಣಿಸಿಕೊಂಡ ಕೊರೊನಾದ ಕರಿನೆರಳು ನಂತರದ ಮೂರು ವರ್ಷಗಳನ್ನೂ ಕಾಡಿದ್ದು ಮಾತ್ರವಲ್ಲ, ಅದರ ಅಡ್ಡಪರಿಣಾಮಗಳು ಈಗಲೂ ಇವೆ.

2020 ಹಾಗೂ 2021ರಲ್ಲಿ ನೂರರ ಗಡಿ ದಾಟದ ಚಿತ್ರರಂಗ, 2022ರಲ್ಲಿ ಏದುಸಿರಿನೊಂದಿಗೆ ನೂರರ ಸಂಖ್ಯೆ ದಾಟಿತಷ್ಟೇ. 2023ರಲ್ಲಿ ಉದ್ಯಮ ಚೇತರಿಕೆಯ ಹಾದಿ ಹಿಡಿದಂತೆ ಸುಮಾರು 175 ಸಿನಿಮಾಗಳು ತೆರೆಕಂಡರೂ, ಗೆಲುವಿನ ರುಚಿ ದಕ್ಕಿದ್ದು ಅಷ್ಟಕ್ಕಷ್ಟೇ.

ನಾಲ್ಕು ಸಾವಿರ ಸಿನಿಮಾಗಳ ಮೈಲುಗಲ್ಲು ಮುಟ್ಟಿದ ಆರು ವರ್ಷಗಳ ನಂತರ ಕನ್ನಡ ಸಿನಿಮಾಗಳ ಪಟ್ಟಿಗೆ ಮತ್ತೊಂದು ಸಾವಿರ ಸೇರ್ಪಡೆಯಾಗಿದೆ. ತೆರೆಕಾಣುವ ಸಿನಿಮಾಗಳ ಸಂಖ್ಯಾ ದೃಷ್ಟಿಯಿಂದಲೂ 2024 ಸಮೃದ್ಧದ ವರ್ಷದಂತೆ ಕಂಡರೂ, ಗುಣಮಟ್ಟದ ಕೆಲವು ಸಿನಿಮಾಗಳಿಂದ ಗಮನಸೆಳೆದರೂ, ಯಶಸ್ಸಿನ ದೃಷ್ಟಿಯಿಂದ ತೀರಾ ನಿರಾಶಾದಾಯಕ ವರ್ಷ. ಈಗ ಪ್ರದರ್ಶನ ಕಾಣುತ್ತಿರುವ 'ಭೀಮ' (ಆಗಸ್ಟ್ 9ರಂದು ತೆರೆಗೆ) ಹಾಗೂ 'ಯುವ' ಚಿತ್ರಗಳ ಸಮಾಧಾನಕರ ಯಶಸ್ಸನ್ನು ಹೊರತುಪಡಿಸಿದರೆ, ಚಿತ್ರೋದ್ಯಮದಲ್ಲಿ ಬೆಳ್ಳಿರೇಖೆಗಳೇ ಮರೀಚಿಕೆ ಎನ್ನುವಂತಾಗಿದೆ.

## ಕೊರೊನಾ ನಂತರದ ಚಿಗುರು-ಕರಕಲು

ಬೇಸಿಗೆಯಲ್ಲಿ ಕರಕಲಾದ ಹುಲ್ಲು ಮಳೆಗೆ ಚಿಗುರಿದಂತೆ ಕೊರೊನಾ ನಂತರ ಕನ್ನಡ ಚಿತ್ರರಂಗದ ಚೇತರಿಕೆ ಗಮನಸೆಳೆಯುವಂತಿತ್ತು. ಕೊರೊನಾ ನಿರ್ಬಂಧಗಳಿಂದಾಗಿ ಮನೆಯಲ್ಲೇ ಉಳಿದಿದ್ದ ಚಿತ್ರರಸಿಕರು ಹೊಸ ಹುಮ್ಮಸ್ಸಿನಿಂದ ಚಿತ್ರಮಂದಿರಗಳಿಗೆ ಬರಲು ತೊಡಗಿದ್ದೂ ಚಿತ್ರೋದ್ಯಮದ ಚೇತರಿಕೆಗೆ ಕಾರಣವಾಯಿತು.

2022ರಲ್ಲಿ ತೆರೆಕಂಡ ಪುನೀತ್ ರಾಜ್‌ಕುಮಾರ್ ನಟನೆಯ 'ಜೇಮ್ಸ್', 'ಗಂಧದಗುಡಿ', ಯಶ್‌ರ 'ಕೆಜಿಎಫ್: ಚಾಪ್ಟರ್ 2' ಹಾಗೂ ರಿಷಬ್ ಶೆಟ್ಟಿ ನಟನೆ–ನಿರ್ದೇಶನದ 'ಕಾಂತಾರ' ಸಿನಿಮಾಗಳ ಬಹು ದೊಡ್ಡ ಯಶಸ್ಸಿನಿಂದಾಗಿ ಚಿತ್ರರಂಗಕ್ಕೆ ಶಕ್ತಿಮದ್ದು ದೊರೆತಂತನ್ನಿಸಿತ್ತು. ಆದರೆ, ಆ



'ಉಪಾಧ್ಯಕ್ಷ'ನಾಗಿ
ಆರಕ್ಕೇರದ ಚಿಕ್ಕಣ್ಣ